ಸಿ.ಸಿ ನಂಬ್ರಃ 593/2023
ಪಿ.ಡಬ್ಲ್ಯೂ : 1

ದಿನಾಂಕಃ 27-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಮುಂದುವರಿದ ಪಾಟೀ ಸವಾಲು: ಆರೋಪಿ ಪರ ಶ್ರೀ ಎಚ್ ಪಿ ಎಚ್ ವಕೀಲರಿಂದ

1. ನನ್ನ ವಕೀಲರ ಮುಖಾಂತರ ಆರೋಪಿಗೆ ನೋಟಿಸು ಯಾವಾಗ ಕೊಟ್ಟಿರುತ್ತೇನೆ ಎಂದು ಗೊತ್ತಿರುವುದಿಲ್ಲ. ಆ ನೋಟಿಸಿನಲ್ಲಿ ಆರೋಪಿಯೊಂದಿಗೆ ಕರಾರು ಆಗಿರುತ್ತದೆ ಎಂದು ಹೇಳಿರುತ್ತೇನೆ. ದಿನಾಂಕ 22-12- 2016 ರಲ್ಲಿ ಕರಾರು ಆಗಿರುತ್ತದೆ. ಗುಲ್ವಾಡಿಯಲ್ಲಿರುವ ಅಶ್ವಕ್ ರವರ ಜಾಗಕ್ಕೆ ಸಂಬಂಧಪಟ್ಟಂತೆ ಕರಾರು ಆಗಿರುತ್ತದೆ. 1 ಎಕರೆ 19 ಸೆಂಟ್ಸ್ ಜಾಗಕ್ಕೆ ಸಂಬಂಧಪಟ್ಟಿರುತ್ತದೆ. ಕರಾರು 9 ಲಕ್ಷಕ್ಕೆ ಆಗಿರುತ್ತದೆ. 6 ತಿಂಗಳ ಒಳಗೆ ಕ್ರಯವಾಗಬೇಕು ಅಂತ ನಮೂದಿಸಲಾಗಿರುತ್ತದೆ. ಅಶ್ವಕ್ ರವರು 6 ತಿಂಗಳ ಒಳಗೆ ಕ್ರಯ ಪತ್ರ ಮಾಡಿಕೊಟ್ಟಿರುವುದಿಲ್ಲ. ತದನಂತರ ನಾವು ವಕೀಲರ ಮುಖಾಂತರ ನೋಟಿಸು ಕೊಟ್ಟಿರುತ್ತೇನೆ. ಅದಕ್ಕೆ ಅವರು ಉತ್ತರ ಕೊಟ್ಟಿರುವುದಿಲ್ಲ.

2. 7-8 ತಿಂಗಳ ನಂತರ ಅವರ ಮನೆಗೆ ಹೋಗಿ ಕೇಳಿದರೂ ಅವರು ಕೊಡುತ್ತೇನೆ ಎಂದು ಕೇಳಿದರು ಕೊಟ್ಟಿರುವುದಿಲ್ಲ. ತದನಂತರ ಕೇಳಿದಾಗ ಅವರು ಹಣ ವಾಪಾಸು ಕೊಡಲು ಒಪ್ಪಿರುತ್ತಾರೆ. ಅದಾದ ನಂತರ 5.5 ಲಕ್ಷದ ಚೆಕ್ ಕೊಟ್ಟಿರುತ್ತಾರೆ. ನಾನು ಕರಾರಿಗೆ ಸಂಬಂಧಪಟ್ಟಂತೆ ಮುಂಗಡ ಹಣವನ್ನು ಚೆಕ್ ಮುಖಾಂತರ ಕೊಟ್ಟಿರುತ್ತೇನೆ. ಚೆಕ್ ನ ಮುಖಾಂತರ ದಿನಾಂಕ 22-12-2016 ರಂದು ಹಣ ಕೊಟ್ಟಿರುತ್ತೇನೆ. ಆರೋಪಿತ ಯಾವುದೇ ಹಣ ಪಾವತಿ ಮಾಡಬೇಕಾಗದೇ ಇಲ್ಲದೇ ಇದ್ದರೂ ಸಹ ನಾನು ಆತನ ವಿರುದ್ಧ ಸುಳ್ಳು ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯಿಂದ ಬರಬೇಕಾದ ಹಣವನ್ನು ಆದಾಯ ತೆರಿಗೆ ರಿಟರ್ನ್ ನಲ್ಲಿ ತೋರಿಸಿರುತ್ತೇನೆ. ಆರೋಪಿಯ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.
ಮರು ವಿಚಾರಣೆ - ಇಲ್ಲ.
ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು**
**ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ (C/c)**